**All India Radio: Bangalore**
**National Bulletin In Kannada**
**15.07.2026  7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**15.07.2026  7.35 am**

**<>><><*><><<>**

ಮುಖ್ಯಾಂಶಗಳು

**೧. ಭಾರತ-ಯುಕೆ ಸಮಗ್ರ ಆರ್ಥಿಕ ಮತ್ತು ಮುಕ್ತ ವ್ಯಾಪಾರ ಒಪ್ಪಂದ ಇಂದಿನಿಂದ ಜಾರಿ: ಆರ್ಥಿಕ ಬಾಂಧವ್ಯದಲ್ಲಿ ಹೊಸ ಮೈಲಿಗಲ್ಲು**

**೨. ಹೈದರಾಬಾದ್‌ನಲ್ಲಿ ಇಂದಿನಿಂದ ೧೨ನೇ ಬ್ರಿಕ್ಸ್ ಕಾರ್ಮಿಕ ಮತ್ತು ಉದ್ಯೋಗ ಸಚಿವರ ಸಭೆ ಆರಂಭ**

**೩. ನವದೆಹಲಿಯಲ್ಲಿಂದು ನಿರ್ಣಾಯಕ ಖನಿಜ ಬ್ಲಾಕ್‌ಗಳ ಎಂಟನೇ ಹಂತದ ಹರಾಜು ಪ್ರಕ್ರಿಯೆಗೆ ಚಾಲನೆ**

**೪. ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್ ಸರಣಿ; ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ೬ ವಿಕೆಟ್‌ಗಳ ಗೆಲುವು**

**೫. ಫಿಫಾ ವಿಶ್ವಕಪ್ ಫುಟ್‌ಬಾಲ್; ಫ್ರಾನ್ಸ್ ವಿರುದ್ಧ ಜಯಗಳಿಸಿ, ಫೈನಲ್‌ಗೆ ಲಗ್ಗೆ ಇಟ್ಟ ಸ್ಪೇನ್**

**<>><><*><><<>**

ಭಾರತ ಮತ್ತು ಯುನೈಟೆಡ್ ಕಿಂಗ್‌ಡಮ್-ಯುಕೆ ನಡುವಿನ ಐತಿಹಾಸಿಕ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ-ಸಿಇಟಿಎ ಹಾಗೂ ಸಾಮಾಜಿಕ ಭದ್ರತೆ ಒಪ್ಪಂದವಾದ ದ್ವಿಗುಣ ಕೊಡುಗೆ ಒಪ್ಪಂದ-ಡಿಸಿಸಿ ಇಂದಿನಿಂದ ಅಧಿಕೃತವಾಗಿ ಅನುಷ್ಠಾನಗೊಂಡಿವೆ. ಈ ಒಪ್ಪಂದ, ಯುಕೆ ಮಾರುಕಟ್ಟೆಯಲ್ಲಿ ಶೇಕಡಾ ೯೯ ರಷ್ಟು ಭಾರತೀಯ ಉತ್ಪನ್ನಗಳಿಗೆ ಸಂಪೂರ್ಣ ಸುಂಕ ರಹಿತ ಪ್ರವೇಶ ಕಲ್ಪಿಸಲಿದ್ದು, ಉಭಯ ದೇಶಗಳ ನಡುವಿನ ವ್ಯಾಪಾರ ಮತ್ತು ಹೂಡಿಕೆ ಸಂಬಂಧಗಳಲ್ಲಿ ಹೊಸ ಅಧ್ಯಾಯಕ್ಕೆ ನಾಂದಿ ಹಾಡಲಿದೆ. ನವದೆಹಲಿಯಲ್ಲಿ ನಿನ್ನೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಅವರು, ಈ ಒಪ್ಪಂದವು ಎರಡು ಬಲಿಷ್ಠ ಆರ್ಥಿಕತೆಗಳ ನಡುವಿನ ಭವಿಷ್ಯದ ಆರ್ಥಿಕ ಸಹಭಾಗಿತ್ವಕ್ಕೆ ಬಲವಾದ ಅಡಿಪಾಯ ಹಾಕಿದೆ ಎಂದು ತಿಳಿಸಿದರು. ಈ ಒಪ್ಪಂದದ ಅಡಿಯಲ್ಲಿ ಜಾರಿಗೆ ಬಂದಿರುವ ದ್ವಿಗುಣ ಕೊಡುಗೆ ಒಪ್ಪಂದ-ಡಿಸಿಸಿ, ತಾತ್ಕಾಲಿಕವಾಗಿ ಯುಕೆ ದೇಶಕ್ಕೆ ನಿಯೋಜನೆಗೊಳ್ಳುವ ಅರ್ಹ ಭಾರತೀಯ ವೃತ್ತಿಪರರಿಗೆ

ಅಲ್ಲಿನ ಸಾಮಾಜಿಕ ಭದ್ರತಾ ವಂತಿಕೆ ಪಾವತಿಯಿಂದ ವಿನಾಯಿತಿ ನೀಡಲಿದ್ದು, ಭಾರತೀಯ ಉದ್ಯೋಗಿಗಳಿಗೆ ಮತ್ತು ಉದ್ಯೋಗದಾತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ. ಈ ಜನಕೇಂದ್ರಿತ ಒಪ್ಪಂದದಡಿ ಭಾರತದ ಪ್ರಮುಖ ರಫ್ತು ವಲಯಗಳಾದ ಸಂಸ್ಕರಿಸಿದ ಆಹಾರ ಉತ್ಪನ್ನ, ಕಡಲ ಉತ್ಪನ್ನ, ಎಂಜಿನಿಯರಿಂಗ್, ಚರ್ಮ ಹಾಗೂ ಜವಳಿ ಉದ್ಯಮಗಳ ಮೇಲಿದ್ದ ಸುಂಕವನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ. ಇದು ಯುಕೆ ಮಾರುಕಟ್ಟೆಯಲ್ಲಿ ಭಾರತೀಯ ಉತ್ಪನ್ನಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಿ ದೇಶದ ರೈತರು, ಮೀನುಗಾರರು ಮತ್ತು ಎಂಎಸ್ಎಂಇ ವಲಯಕ್ಕೆ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ. ಇದೇ ವೇಳೆ, ಭಾರತ ತನ್ನ ದೇಶೀಯ ಮಾರುಕಟ್ಟೆಯ ಹಿತಾಸಕ್ತಿಯನ್ನು ಕಾಯ್ದುಕೊಂಡಿದ್ದು, ಡೈರಿ ಉತ್ಪನ್ನಗಳು, ಧಾನ್ಯಗಳು, ಖಾದ್ಯ ತೈಲಗಳು ಸೇರಿದಂತೆ ಪ್ರಮುಖ ಸೂಕ್ಷ್ಮ ವಲಯಗಳಿಗೆ ಒಪ್ಪಂದದ ಅಡಿಯಲ್ಲಿ ಸಂಪೂರ್ಣ ರಕ್ಷಣೆ ಒದಗಿಸಿದೆ.

**<>><><*><><<>**

ಭಾರತದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ೧೨ನೇ ಬ್ರಿಕ್ಸ್ ಕಾರ್ಮಿಕ ಮತ್ತು ಉದ್ಯೋಗ ಸಚಿವರ ಎರಡು ದಿನಗಳ ಸಭೆ ಇಂದಿನಿಂದ ಹೈದರಾಬಾದ್‌ನಲ್ಲಿ ಆರಂಭವಾಗಲಿದೆ. 'ಸ್ಥಿತಿಸ್ಥಾಪಕತ್ವ, ಆವಿಷ್ಕಾರ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ' ಎಂಬ ಭಾರತದ ಬ್ರಿಕ್ಸ್ ಅಧ್ಯಕ್ಷತೆಯ ಧ್ಯೇಯವಾಕ್ಯದಡಿ ಈ ಸಭೆ ಆಯೋಜಿಸಲಾಗಿದ್ದು, ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಕಾರ್ಮಿಕ ಮತ್ತು ಉದ್ಯೋಗ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವೀಯ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಸಮ್ಮೇಳನದಲ್ಲಿ ಕಾರ್ಮಿಕ ವಲಯಕ್ಕೆ ಸಂಬಂಧಿಸಿದ ಪ್ರಮುಖ ನಾಲ್ಕು ಆದ್ಯತಾ ಕ್ಷೇತ್ರಗಳ ಕುರಿತು ಸಚಿವರು ವಿಸ್ತೃತವಾಗಿ ಚರ್ಚಿಸಲಿದ್ದಾರೆ. ವಿಶೇಷವಾಗಿ ಸಾಮಾಜಿಕ ಭದ್ರತೆಯನ್ನು ಉತ್ತೇಜಿಸುವುದು, ಕಾರ್ಮಿಕ ಮಾರುಕಟ್ಟೆಗಳ ಸುಧಾರಣೆ ಹಾಗೂ ಕಾರ್ಯಪಡೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಮತ್ತು ಒಳಗೊಳ್ಳುವಿಕೆಯನ್ನು ಹೆಚ್ಚಿಸುವ ಕುರಿತು ಸಮಾಲೋಚನೆ ನಡೆಯಲಿದೆ. ಇದರಜೊತೆಗೆ, ಉದ್ಯೋಗ ಕಾರ್ಯನಿರತ ಗುಂಪು ಸಿದ್ಧಪಡಿಸಿರುವ ಕರಡು ಘೋಷಣೆಯನ್ನು ಸಭೆಯಲ್ಲಿ ಪರಿಶೀಲಿಸಿ ಅಂಗೀಕರಿಸುವ ಸಾಧ್ಯತೆಯಿದೆ. ಬ್ರಿಕ್ಸ್ ರಾಷ್ಟ್ರಗಳ ನಡುವೆ ಕಾರ್ಮಿಕ ಮಾರುಕಟ್ಟೆ ನೀತಿಗಳು, ಕಾರ್ಮಿಕರ ಕಲ್ಯಾಣ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೃಷ್ಟಿಯಲ್ಲಿ ಪರಸ್ಪರ ಸಹಕಾರವನ್ನು ಬಲಪಡಿಸಲು ಈ ಸಮ್ಮೇಳನವು ಉತ್ತಮ ವೇದಿಕೆಯಾಗಿದೆ.

**<>><><*><><<>**

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಭಾರತದ ಉನ್ನತ ಮಟ್ಟದ ಉದ್ಯಮಿಗಳ ನಿಯೋಗದೊಂದಿಗೆ ನಿನ್ನೆ ಬೆಲ್ಜಿಯಂ ರಾಜಧಾನಿ ಬ್ರಸೆಲ್ಸ್‌ಗೆ ಆಗಮಿಸಿದ್ದು, ಐರೋಪ್ಯ

ರಾಷ್ಟ್ರಗಳೊಂದಿಗೆ ವ್ಯಾಪಾರ, ಹೂಡಿಕೆ ಮತ್ತು ತಂತ್ರಜ್ಞಾನ ವಲಯದ ಬಾಂಧವ್ಯ ವೃದ್ಧಿಗೆ ಮುಂದಾಗಿದ್ದಾರೆ. ಭೇಟಿಯ ಭಾಗವಾಗಿ ಬೆಲ್ಜಿಯಂ ಉಪ ಪ್ರಧಾನಿ ಡೇವಿಡ್ ಕ್ಲಾರಿನ್ವಲ್ ಅವರನ್ನು ಭೇಟಿಯಾದ ಸಚಿವರು, ಭಾರತ- ಐರೋಪ್ಯ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದದ ಪ್ರಗತಿ ಹಾಗೂ ದ್ವಿಪಕ್ಷೀಯ ಆರ್ಥಿಕ ಸಂಬಂಧಗಳನ್ನು ಬಲಪಡಿಸುವ ಕುರಿತು ಸುದೀರ್ಘ ಚರ್ಚೆ ನಡೆಸಿದರು. ಬಳಿಕ ಐರೋಪ್ಯ ಒಕ್ಕೂಟದ ಹವಾಮಾನ ಆಯುಕ್ತರು ಮತ್ತು ಕೃಷಿ ಆಯುಕ್ತರನ್ನು ಪ್ರತ್ಯೇಕವಾಗಿ ಭೇಟಿಯಾದ ಸಚಿವರು, ನವೀಕರಿಸಬಹುದಾದ ಇಂಧನ, ಹಸಿರು ಹೈಡ್ರೋಜನ್, ಸುಸ್ಥಿರ ಕೃಷಿ ಬೆಳವಣಿಗೆ ಮತ್ತು ಜಾಗತಿಕ ಆಹಾರ ಭದ್ರತೆಯ ಕುರಿತು ಸಹಭಾಗಿತ್ವವನ್ನು ವಿಸ್ತರಿಸುವ ಬಗ್ಗೆ ಮಹತ್ವದ ಮಾತುಕತೆ ನಡೆಸಿದರು. ಶೂನ್ಯ ಇಂಗಾಲ ಹೊರಸೂಸುವಿಕೆ ಗುರಿ ಸಾಧನೆಗೆ ಜಾಗತಿಕ ಕ್ರಮಗಳನ್ನು ಬಲಪಡಿಸಲು ಉಭಯ ನಾಯಕರು ಸಮ್ಮತಿಸಿದರು.

<>><><*><><<>

ಕೇಂದ್ರ ಸರ್ಕಾರ, ೧೯ ಉಪ-ವಲಯಗಳಿಗೆ ದೇಶದ ಮೊದಲ ಪ್ರಾಯೋಗಿಕ ಸೇವಾ ಉತ್ಪಾದನಾ ಸೂಚ್ಯಂಕವನ್ನು - ಐಎಸ್‌ಪಿ ಬಿಡುಗಡೆ ಮಾಡಿದೆ. ಇದರ ಮೂಲಕ ಮೊದಲ ಬಾರಿಗೆ, ಸೇವಾ ವಲಯದಲ್ಲಿ ಅಲ್ಪಾವಧಿಯ ಚಟುವಟಿಕೆಯ ಮಾಸಿಕ ಅಳತೆಯನ್ನು ಒದಗಿಸಲಾಗುತ್ತಿದೆ. ೨೦೨೪-೨೫ ಅನ್ನು ಮೂಲ ವರ್ಷವಾಗಿ ಹೊಂದಿರುವ ಉದ್ಘಾಟನಾ ಸೂಚ್ಯಂಕ ಏಪ್ರಿಲ್ ೨೦೨೬ ಅನ್ನು ಸಹ ಒಳಗೊಂಡಿದ್ದು, ಭಾರತದ ಸೇವಾ ವಲಯದ ಸುಮಾರು ೬೦ ಪ್ರತಿಶತವನ್ನು ಹೊಂದಿದೆ. ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು, ಭಾರತದ ಸೇವಾ ವಲಯದ ಮಾಪನವನ್ನು ಸುಧಾರಿಸುವಲ್ಲಿ ಮತ್ತು ದೇಶದ ಅಂಕಿಅಂಶಗಳ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಉಪ-ವಲಯಗಳ ಐಎಸ್‌ಪಿ ಒಂದು ಪ್ರಮುಖ ಮೈಲಿಗಲ್ಲು ಎಂದು ವಿವರಿಸಿದೆ. ಪ್ರಾಯೋಗಿಕ ಸರಣಿಯ ಸ್ಥಿರತೆಯನ್ನು ಮೌಲ್ಯಮಾಪನ ಮಾಡಿ ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸಿದ ನಂತರ ಸಮಗ್ರ ಸೇವಾ ಉತ್ಪಾದನಾ ಸೂಚ್ಯಂಕವನ್ನು ಪರಿಚಯಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.

<>><><*><><<>

ಕೇಂದ್ರ ಕಲ್ಲಿದ್ದಲು ಮತ್ತು ಗಣಿ ಸಚಿವ ಜಿ. ಕಿಶನ್ ರೆಡ್ಡಿ ಅವರು ಇಂದು ಒಂಬತ್ತು ರಾಜ್ಯಗಳಲ್ಲಿ ವ್ಯಾಪಿಸಿರುವ ೨೦ ನಿರ್ಣಾಯಕ ಮತ್ತು ಕಾರ್ಯತಂತ್ರದ ಖನಿಜ ಬ್ಲಾಕ್‌ಗಳ ಲನೇ ಹಂತದ ಹರಾಜು ಪ್ರಕ್ರಿಯೆಗೆ ಅಧಿಕೃತವಾಗಿ ಚಾಲನೆ ನೀಡಲಿದ್ದಾರೆ. ಸ್ವಚ್ಛ ಇಂಧನ, ರಕ್ಷಣೆ ಮತ್ತು ಸುಧಾರಿತ ಉತ್ಪಾದನಾ ವಲಯಗಳಿಗೆ ಅಗತ್ಯವಾಗಿರುವ ಮಾಲಿಬ್ದಿನಮ್, ಗ್ರಾಫೈಟ್, ಲಿಥಿಯಂ ಮತ್ತು ಟೈಟಾನಿಯಂ ಸೇರಿದಂತೆ ಪ್ರಮುಖ ಖನಿಜಗಳು ಈ ಬ್ಲಾಕ್‌ಗಳಲ್ಲಿ ಒಳಗೊಂಡಿವೆ ಎಂದು

ಗಣಿ ಸಚಿವಾಲಯ ತಿಳಿಸಿದೆ. ಈವರೆಗೆ ನಡೆದಿರುವ ಏಳು ಹಂತಗಳಲ್ಲಿ ಸಚಿವಾಲಯ, ೮೮ ಬ್ಲಾಕ್‌ಗಳ ಪೈಕಿ ೫೬ ಬ್ಲಾಕ್‌ಗಳನ್ನು ಯಶಸ್ವಿಯಾಗಿ ಹರಾಜು ಮಾಡಿದ್ದು, ಶೇಕಡಾ ೬೩ ಕ್ಕೂ ಹೆಚ್ಚು ಯಶಸ್ಸಿನ ಪ್ರಮಾಣ ದಾಖಲಿಸಿದೆ. ಹರಾಜು ಸುತ್ತುಗಳಲ್ಲಿ ಉದ್ಯಮ ವಲಯದಿಂದ ವ್ಯಕ್ತವಾಗುತ್ತಿರುವ ಭಾರಿ ಬೆಂಬಲ, ಸರ್ಕಾರದ ಪಾರದರ್ಶಕ ಮತ್ತು ಮಾರುಕಟ್ಟೆ ಆಧಾರಿತ ಹರಾಜು ವ್ಯವಸ್ಥೆಯ ಮೇಲಿರುವ ಹೂಡಿಕೆದಾರರ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ. ಇದರೊಂದಿಗೆ ಭಾರತೀಯ ಖನಿಜ ವಲಯವು, ೨೦೨೫-೨೬ರ ಹಣಕಾಸು ವರ್ಷದಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದ್ದು, ಹರಾಜು ಪದ್ಧತಿ ಜಾರಿಗೆ ಬಂದ ನಂತರ ಅತ್ಯಧಿಕ ಒಟ್ಟು ೨೧೨ ಖನಿಜ ಬ್ಲಾಕ್‌ಗಳನ್ನು ಯಶಸ್ವಿಯಾಗಿ ಹರಾಜು ಮಾಡಿದೆ.

<>><><*><><<>

ಬರ್ಮಿಂಗ್‌ಹ್ಯಾಮ್‌ನ ಎಡ್ಜ್‌ಬಾಸ್ಟನ್‌ನಲ್ಲಿ ಕಳೆದ ರಾತ್ರಿ ನಡೆದ ೩ ಪಂದ್ಯಗಳ ಪುರುಷರ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ, ಆತಿಥೇಯ ಇಂಗ್ಲೆಂಡ್ ತಂಡದ ವಿರುದ್ಧ ಭಾರತ ತಂಡ, ೬ ವಿಕೆಟ್‌ಗಳ ಜಯ ಸಾಧಿಸಿತು. ಇದರೊಂದಿಗೆ, ಭಾರತ ತಂಡ, ಸರಣಿಯಲ್ಲಿ ೧-೦ ಅಂತರದಲ್ಲಿ ಮುನ್ನಡೆ ಸಾಧಿಸಿದೆ. ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ೪೮ ಓವರ್‌ಗಳಲ್ಲಿ ೨೫೮ ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. ಭಾರತ ಪರ ಅಕ್ಷರ್ ಪಟೇಲ್ ೪ ವಿಕೆಟ್‌ಗಳನ್ನು ಪಡೆದರು. ಗುರಿ ಬೆನ್ನತ್ತಿದ ಭಾರತ ತಂಡ, ನಾಯಕ ಶುಭ್‌ಮನ್ ಗಿಲ್ ಅವರ ೮೦ ರನ್‌ಗಳ ಅದ್ಭುತ ಇನ್ನಿಂಗ್ಸ್‌ನ ಸಹಾಯದಿಂದ ಸುಲಭವಾಗಿ ಜಯ ಸಾಧಿಸಿತು, ಇದಲ್ಲದೆ, ವಾಷಿಂಗ್ಟನ್ ಸುಂದರ್ ಮತ್ತು ಅಕ್ಷರ್ ಪಟೇಲ್ ಇಬ್ಬರೂ ಅರ್ಧಶತಕ ಗಳಿಸಿದರು. ಆಲ್‌ರೌಂಡ್ ಪ್ರದರ್ಶನ ನೀಡಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಅಕ್ಷರ್ ಪಟೇಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಎರಡೂ ತಂಡಗಳು ನಾಳೆ ಕಾರ್ಡಿಫ್‌ನ ಸೋಫಿಯಾ ಗಾರ್ಡನ್ಸ್‌ನಲ್ಲಿ ನಡೆಯಲಿರುವ ಎರಡನೇ ಏಕದಿನ ಪಂದ್ಯದಲ್ಲಿ ಪರಸ್ಪರ ಮುಖಾಮುಖಿಯಾಗಲಿವೆ. ಮೂರನೇ ಏಕದಿನ ಪಂದ್ಯ ಭಾನುವಾರ ಲಂಡನ್‌ನ ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ.

<>><><*><><<>

ಅಮೆರಿಕದ ಟೆಕ್ಸಾಸ್‌ನ ಡಲ್ಲಾಸ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಫಿಫಾ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಸ್ಪೇನ್ ತಂಡ ಫ್ರಾನ್ಸ್ ವಿರುದ್ಧ ೨-೦ ಗೋಲುಗಳ ಅಂತರದ ಭರ್ಜರಿ ಜಯ ಸಾಧಿಸುವ ಮೂಲಕ ಫಿಫಾ ವಿಶ್ವಕಪ್-೨೦೨೬ರ ಫೈನಲ್‌ಗೆ ಲಗ್ಗೆ ಇಟ್ಟಿದೆ. ಮೈಕೆಲ್ ಒಯರ್ಜಾಬಲ್ ೨೨ ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ ಖಾತೆ ತೆರೆದರು, ಪೆಡ್ರೊ ಪೊರೊ ಎರಡನೇ ಗೋಲು ಗಳಿಸುವ ಮೂಲಕ ಗೆಲುವು

ಖಚಿತಪಡಿಸಿಕೊಂಡರು.  ಅಟ್ಲಾಂಟಾದಲ್ಲಿ ಇಂದು ಮಧ್ಯರಾತ್ರಿ ನಡೆಯಲಿರುವ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ, ಹಾಲಿ ಚಾಂಪಿಯನ್ ಅರ್ಜೆಂಟೀನಾ, ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ಮಧ್ಯರಾತ್ರಿ ೧೨.೩೦ಕ್ಕೆ ಆರಂಭವಾಗಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ  ><><<>**